# ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.ಕಾರಿಯವರ ನ್ಯಾಯಾಲಯ, ಮಡಿಕೇರಿ, ಕೊಡಗು.

## ಓ. ಎಸ್. ಸಂಖ್ಯೆಃ 145/2022

ಪಿಡಬ್ಲ್ಯುಃ 1

ದಿನಾಂಕಃ 13.02.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | - ನಿಡಿಂಜಿ ಚಂದ್ರಶೇಖರ್ |
| ತಂದೆಯ ಹೆಸರು | - ಲೇಟ್ ಬೋಜಪ್ಪ |
| ವಯಸ್ಸು | - 52 ವರ್ಷ |
| ವೃತ್ತಿ | - ವ್ಯವಸಾಯ |
| ವಾಸಸ್ಥಳ | - ಯು. ಚೆಂಬು ಗ್ರಾಮ |

ಮುಖ್ಯ ವಿಚಾರಣೆಃ ವಾದಿಗಳ ಪರವಾಗಿಃ- ಶ್ರೀ. ಜೆ ಎಸ್ ಬಿ ವಕೀಲರಿಂದಃ-

ನಾನು ಈ ದಾವಾದಲ್ಲಿ 5 ನೇ ವಾದಿಯಾಗಿದ್ದೇನೆ. ನಾನು, ನನ್ನ ಪರವಾಗಿ ಮತ್ತು ಉಳಿದ ವಾದಿಗಳ ಪರವಾಗಿ ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದೇನೆ. ಸದರಿ ಪ್ರಮಾಣ ಪತ್ರದಲ್ಲಿರುವ ಅಂಶಗಳನ್ನು ನಾನೇ ಖುದ್ದಾಗಿ ಬರೆಸಿರುತ್ತೇನೆ ಹಾಗೂ ಅದರಲ್ಲಿರುವ ಅಂಶಗಳು ಸತ್ಯವೆಂದು ಪ್ರಮಾಣೀಕರಿಸುತ್ತೇನೆ.

2. ನಾನು ನನ್ನ ಪರವಾಗಿ ಮುಂದಿನ ದಾಖಲೆಗಳನ್ನು ಹಾಜರು ಮಾಡಿದ್ದೇನೆ. ಅವುಗಳನ್ನು ನಿಶಾನೆಗಳನ್ನಾಗಿ ಗುರುತಿಸಬೇಕಾಗಿ ಕೋರಿಕೊಳ್ಳುತ್ತೇನೆ.

3. ದಿಃ 10.08.2011 ರ ಗ್ರಾಮ ಪಂಚಾಯತಿಯ ನ್ಯಾಯಾ ಸಮಿತಿಯ ದೃಢೀಕೃತ ಆದೇಶವನ್ನು ಹಾಜರು ಮಾಡಿದ್ದೇನೆ. ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ದಿಃ 05.02.2022 ರ ಚೆಂಬು ಗ್ರಾಮದ ಪಿ ಡಿ ಒ ರವರು ನೀಡಿದ ಹಿಂಬರಹದ ದೃಢೀಕರಣ ಪತ್ರವನ್ನು ಹಾಜರು ಮಾಡಿದ್ದೇನೆ ಅದನ್ನು ನಿಪಿ-2 ಎಂದು ಗುರುತಿಸಲಾಯಿತು. ದಿಃ 26.08.2022 ರ ಕಂದಾಯ ಅಧಿಕಾರಿಗಳು ಸಂಪಾಜೆ ಹೋಬಳಿರವರು ನೀಡಿದ ಹಿಂಬರಹದ ದೃಢೀಕರಣ ಪತ್ರವನ್ನು ಹಾಜರು ಮಾಡಿದ್ದೇನೆ ಅದನ್ನು ನಿಪಿ-3 ಎಂದು ಗುರುತಿಸಲಾಯಿತು. ದಿಃ 10.08.2022 ರ ದೃಢೀಕೃತ 1 ನೇ ವಾದಿ ಮತ್ತು ಇತರರ ಹೇಳಿಕೆ

ಯನ್ನು ಹಾಜರು ಮಾಡಿದ್ದೇನೆ. ಅದನ್ನು ನಿಪಿ-4 ಎಂದು ಗುರುತಿಸಲಾಯಿತು. ದಿಃ 28.01.2022 ರ ನೋಟಿಸಿನ ಕಚೇರಿ ಪ್ರತಿಯನ್ನು ಹಾಜರು ಮಾಡಿದ್ದೇನೆ. ಅದನ್ನು ನಿಪಿ-5 ಎಂದು ಗುರುತಿಸಲಾಯಿತು. ದಿಃ 06.02.2022 ರ ಉತ್ತರವನ್ನು ಹಾಜರು ಮಾಡಿದ್ದೇನೆ. ಅದನ್ನು ನಿಪಿ-6 ಎಂದು ಗುರುತಿಸಲಾಯಿತು. ದಿಃ 20.07.2022 ರ ದೂರಿನ ಕಚೇರಿ ಪ್ರತಿಯನ್ನು ಹಾಜರು ಮಾಡಿದ್ದೇನೆ. ಅದನ್ನು ನಿಪಿ-7 ಎಂದು ಗುರುತಿಸಲಾಯಿತು. ಯು. ಚೆಂಬು ಗ್ರಾಮದ ಸರ್ವೆ ನಂಬರ್ 8/97 ಎ, ಸರ್ವೆ ನಂಬರ್ 8/73, ಸರ್ವೆ ನಂಬರ್ 8/36, ಸರ್ವೆ ನಂಬರ್ 8/80, ಸರ್ವೆ ನಂಬರ್ 8/152, ಸರ್ವೆ ನಂಬರ್ 8/302, ಸರ್ವೆ ನಂಬರ್ 8/346, ಸರ್ವೆ ನಂಬರ್ 8/24 ನ್ನು ಹಾಜರು ಮಾಡಿದ್ದೇನೆ. ಅವುಗಳನ್ನು ಕ್ರಮವಾಗಿ ನಿಪಿ8 ರಿಂದ ನಿಪಿ-15 ಎಂದು ಗುರುತಿಸಲಾಯಿತು. 7 ಭಾವಚಿತ್ರಗಳನ್ನು ಮತ್ತು ಒಂದು ಸಿ ಡಿಯನ್ನು ಹಾಜರು ಮಾಡಿದ್ದೇನೆ. ಅವುಗಳನ್ನು ನಿಪಿ-16 ರಿಂದ ನಿಪಿ-23 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ- ಪ್ರತಿವಾದಿಯರ ಪರ ಕು. ಟಿ. ಎಂ. ಎ. ವಕೀಲರ ಕೋರಿಕೆಯ ಮೇರೆಗೆ ಸಾಕ್ಷಿಯ ಪಾಟಿ ಸವಾಲಿಗೆ ಮುಂದೂಡಲಾಯಿತು.

ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸರಿ ಇದೆ.

ಸಹಿ/-
ಪ್ರಧಾನ ಜೆ ಎಂ ಎಫ್ ಸಿ, ಮಡಿಕೇರಿ.